ಇ) ಇಲ್ಲ.

ಈ) ಬಂದಿದೆ.

ಉ) ಈ ವಿಷಯದ ಬಗ್ಗೆ ವಿಚಾರಣೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಇಪ್ಪತ್ತೈದಂಟನೇ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ಪಟ್ಟಿ ಸಭೆಯ ಮುಂದಿಡಲಾಯಿತು.

ಮುಜರಾಯಿ ದೇವಸ್ಥಾನಗಳಲ್ಲಿ ಅರ್ಚಕರ ನೇಮಕಾತಿ ಬಗ್ಗೆ

೧೭೫೦. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಮಾನ್ಯ ಧಾರ್ಮಿಕ ಮತ್ತು ಪತ್ತಿ ಹಾಗೂ ನಿಯಂತ್ರಿಕ ಮಾರಂಟ್ಟಿ ಮತ್ತು ಖುಷ್ಕಿ ಜಮೀನು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಮುಜರಾಯಿ ದೇವಸ್ಥಾನಗಳೆಷ್ಟು ?

ಆ) ದೇವಸ್ಥಾನದ ಅರ್ಚಕರಿಗೆ ಸರ್ಕಾರದಿಂದ ನೀಡುತ್ತಿರುವ ಸೌಲಭ್ಯಗಳೇನು ?

ಇ) ದೇವಸ್ಥಾನದ ಅರ್ಚಕರಲ್ಲಿ ಪರಿಶಿಷ್ಟ ಜಾತಿ ವರ್ಗದ ಜನರಿದ್ದಾರೆಯೇ. (ಜಿಲ್ಲಾವಾರು ವಿವರ ನೀಡುವುದು) ?

ಈ) ಮುಜರಾಯಿ ದೇವಸ್ಥಾನಗಳಿಗೆ ಪರಿಶಿಷ್ಟ ಜಾತಿ ವರ್ಗದ ಅರ್ಚಕರನ್ನು ನೇಮಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೆ ?

ಶ್ರೀ ಕೆ. ಅಮರನಾಥ ಶೆಟ್ಟಿ (ಮುಜರಾಯಿ ರಾಜ್ಯ ಸಚಿವರು).—

ಅ) ೪೦,೨೮೦

ಆ) ಆಯಾ ದೇವಸ್ಥಾನದ ಆದಾಯಕ್ಕನು ಗುಣವಾಗಿ, ನಿಗದಿತ ಸಂಬಳ ಮತ್ತು ಸೇವಾರ್ಥದಲ್ಲಿ ಕಮಿಷನ್ ಹಾಗೂ ಕೆಲವಡೆಗಳಲ್ಲಿ ವಸತಿ ಸೌಕರ್ಯ ಕಲ್ಪಿಸಲಾಗುವುದು.

ಇ) ಇದ್ದಾರೆ. ವಿವರ ಪಟ್ಟಿ ಲಗತ್ತಿಸಿದೆ.

ಈ) ಅವಕಾಶವಿದ್ದಲ್ಲಿ ಮಾಡಲಾಗುತ್ತಿದೆ.

ಹರಿಜನ ಮಂತ್ತು ಗಿರಿಜನ ಅರ್ಜಿಕರ ವಿವರ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಅರ್ಜಿಕರ ಸಂಖ್ಯೆ	ಹರಿಜನ	ಗಿರಿಜನ
೧	೨	೩	೪	೫
೧.	ಕೊಡಗು		ಇಲ್ಲ	ಇಲ್ಲ
೨.	ಚಿತ್ರದುರ್ಗ	೧೪೧	೪	೩
೩.	ಚಿಕ್ಕಮಗಳೂರು	೧೫೮	ಇಲ್ಲ	ಇಲ್ಲ
೪.	ಕೋಲಾರ	೨೦೧೬	೧೪೩	೨೨
೫.	ದಕ್ಷಿಣ ಕನ್ನಡ	೩೭೨೩	ಇಲ್ಲ	ಇಲ್ಲ
೬.	ಬೆಳಗಾಂ	ಇಲ್ಲ	(ಧಾರವಾಡ, ಬಿಜಾಪುರ, ಬೆಳಗಾಂ ಉತ್ತರ ಕನ್ನಡ ಜಿಲ್ಲೆ)	
೭.	ತುಮಕೂರು	೨೬೩೦	೧೨	೧೦
೮.	ಹಾಸನ	೨೮೭೦	೫೮	೨
೯.	ಮೈಸೂರು	೧೮೩೪	೧	[redacted]
೧೦.	ಗುಲ್ಬರ್ಗ	೨೯೬೬	೩೯	—
೧೧.	ಬಳ್ಳಾರಿ	೬೦೩	೨೫	೧೦೬
೧೨.	ಬೀದರ್	೨೨೮	ಇಲ್ಲ	ಇಲ್ಲ
೧೩.	ಶಿವಮೊಗ್ಗ	೧೩೯೮	ಇಲ್ಲ	ಇಲ್ಲ
೧೪.	ರಾಯಚೂರು	೯೧೮	೮೫	೨
೧೫.	ಮಂಡ್ಯ	೨೩೭೮	ಇಲ್ಲ	ಇಲ್ಲ
೧೬.	ಬೆಂಗಳೂರು (ಗ್ರಾಮಾಂತರ)	೨೧೨೯	೮	೨೬
೧೭.	ಬೆಂಗಳೂರು (ನಗರ)	೧೦೬೨	೪	ಇಲ್ಲ
	ಒಟ್ಟು	೨೪೭೬೪	೩೭೯	೧೭೧

ದಕ್ಷಿಣ ಕನ್ನಡ ಭೂನ್ಯಾಯ ಮಂಡಳಿಗಳ ಕೆಲಸ

೧೭೪೪. ಶ್ರೀ ಬಿ.ಎಂ. ಇದಿನಬ್ಬ(ಉಳ್ಳಾಲ).—ಮಾನ್ಯ ಕಂದಾಯ ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಈಗ ಅಸ್ತಿತ್ವಕ್ಕೆ ಬಂದಿರುವ ದಕ್ಷಿಣ ಕನ್ನಡ ಜಿಲ್ಲೆಯ ಬೇರೆ ಬೇರೆ ತಾಲ್ಲೂಕುಗಳ ಭೂ ನ್ಯಾಯ ಮಂಡಳಿಗಳಲ್ಲಿ ೧೯೮೮ನೇ ಮಾರ್ಚಿ ಅಖೈರವರೆಗೆ ಎಷ್ಟು ಅರ್ಜಿಗಳು ತೀರ್ಪಾಗಿದೆ. ಧನಿಗಳ ಪರ ಎಷ್ಟು? ಒಕ್ಕಲುಗಳ ಪರ ಎಷ್ಟು ?

ಆ) ಇನ್ನು ಇಡೀ ಜಿಲ್ಲೆಯಲ್ಲಿ ತೀರ್ಪಾಗಲು ಎಷ್ಟು ಅರ್ಜಿಗಳು ಬಾಕಿ ಇವೆ.

ಇ) ಬಾಕಿಯಿರುವ ಅರ್ಜಿಗಳಲ್ಲಿ

ನಂ. ೭ ರದ್ದು ಎಷ್ಟು ?

ನಂ. ೨ ರದ್ದು ಎಷ್ಟು ?

ಈ) ಈ ಅರ್ಜಿಗಳನ್ನು ಸಂಪೂರ್ಣವಾಗಿ ಎಷ್ಟು ಸಮಯದಲ್ಲಿ ಇತ್ಯರ್ಥಗೊಳಿಸಲಾಗುವುದು ?